ಫಾರೆಸ್ಟ್ ಇಲಾಖಾ.

ಇಸ್ತಿಹಾರ್ ನಾಮೆ.

ತಾರೀಖು 6ನೇ ಜನವರೀ 1887.

ಇದರಿಂದ ಪ್ರಕಟಪಡಿಸುವದೇನಂದರೆ, ಹಾಸನ ಡಿಸ್ಟ್ರಿಕ್ಟು ಉತ್ಪತ್ತೀ ಬಾಬತು ಇದರಡೀ ಕಂಡ ನಾಟಾಗಳು, ಹಾಸನದ ಡಿಪೋದಲ್ಲಿ ಡೆಪ್ಯುಟಿ ಕಮ್ಮಿಷನರ್ ಮತ್ತು ಫಾರೆಸ್ಟು ಆಫೀಸರವರಿಂದ 1887ನೇ ಇಸವಿ ಫಿಬ್ರವರೀ 3ನೇ ಮರ್ಕುಮಿನಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

ನಾಟಾದ ತಪಶೀಲು.	ನಾಟಾಗಳ ಸಂಖ್ಯೆ.	
ಕೂವೆ (ಪೂರ್) ..	49	
ನಂದಿ ..	151	
ಹೆಸವಾ (ಕಾಡಹಲಸು) ..	34	
ಮತ್ತಿ ..	17	
ಕರೀಮರ ..	1	
ಮಳಲಿ (ಯಬೊನಿ) ..	6	
ಕಾಡುಮರ ..	62	
ಜುಮ್ಲಾ	320	ಸ್ವಲ್ಪ ಹೆಚ್ಚುಕಡಿಮೆ.

ಹರಾಜಿನ ಷರತ್ತುಗಳು—1873ನೇ ಇಸವಿ ಜೂನ್ 12ನೇ ಮರ್ಕುಂ 20ನೇ ನಂಬರ್ ಮೈಸೂರು ಗೆಜೆಟ್ಟಿನಲ್ಲಿ ಫಾಯಿಷ್ಮಾಡಲ್ಪಟ್ಟ ಪ್ರಕಾರ ಇರತಕ್ಕನು; ಮತ್ತು ಹರಾಜ್ ಕಾಲದಲ್ಲಿ ಪೋದಲ್ಪಡುವವು.

ಯಲ್. ರಿಕ್ಕೆಟ್ಸ್,
ಇನ್‌ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ಬೆಂಗಳೂರು ಡಿಸ್ಟ್ರಿಕ್ಟು.

ಬೆಂಗಳೂರು ಸಬ್ ಜಡ್ಜೀಯವರ ಕೋರ್ಟಿನಲ್ಲಿ.

ದಿವಾಳೀಯಾದ ಡಿಕ್ರಿ ದೇಣೇದಾರ ಬೆಂಗಳೂರು ಶಿದ್ದಿಕಟ್ಟೆಯಲ್ಲಿರತಕ್ಕ ಹಿರಾಬೂಬಿನ ವಿಷಯದಲ್ಲಿ—

ಸನ್ 1886ನೇ ಇಸವಿ ದಿವಾಳಿ ಕೇಸ್ ನಂಬರು ಮಿ॥ 723.

ಹುಕ್ಕುಂ.

ಮೇಲ್ಕಂಡ ಹಿರಾಬೂಬಿಯು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜಿ ಅಂಶವು ಸಬ್ ಜಡ್ಜಿಯವರಾದ ಮೆ॥ ಸಿ. ಕ್ರೆನ್ ಸಾಹೇಬರವರ ರೂಬರೂ ಅರ್ಜೀದಾರಳಾದ ಹಿರಾಬೂಬಿಯು ಖುದ್ದಾಗಿಯೂ ಮತ್ತು ಸದರೀಯವಳ ಲೇಣೇದಾರ್ರಾದ 1—2ನೇರ ತರಫ್ ಪ್ಲೀಡರ್ ಗಂಗಾಧರೈಯನವರಿಗೂ ದರ್ಯಾಫ್ತಿ ಮಾಡಲ್ಪಟ್ಟಿತು.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಹಿರಾಬೂಬಿಯು ಹೊಂದುವದಕ್ಕೆ ಹಕ್ಕುದಾರಳಾಗುವದರ ಮೂಲಕ ದಿವಾಳಿಯಾದವಳೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವಳನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕೋಸ್ಕರವಾಗಿಯಾಗಲಿ ದಸ್ತಗಿರಿಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವಳನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸನ್ 1886ನೇ ಇಸವಿ ಡಿಶಂಬರ್ 6ನೇ ತಾರೀಖಿನಲ್ಲಿ ಈ ಕೋರ್ಟು ಮೊಹರು ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.